**ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀಮತಿ ಎಸ್.ವೀಣಾ ಅಚ್ಚಯ್ಯ ಇವರು ಧಾರ್ಮಿಕ ದತ್ತಿ ಇಲಾಖೆಗೆ ಸೇರಿದ "ಕೊಡಗು ಜಿಲ್ಲೆಯ ಪವಿತ್ರ ಕ್ಷೇತ್ರವಾದ ಭಾಗಮಂಡಲದ ಶ್ರೀ ಭಗಂಡೇಶ್ವರ ದೇವಸ್ಥಾನದಲ್ಲಿ ಅತಿಥಿ ಗೃಹ, ಪಿಂಡ ಪ್ರದಾನ ಜಾಗದಲ್ಲಿ ಇಂಟರ್‌ಲಾಕ್ ಅಳವಡಿಕೆ, ತಕ್ಷಕವನ ಮುಂತಾದ ಅತೀ ಅತ್ಯವಶ್ಯಕ ಹಾಗೂ ಪ್ರಮುಖ ಕೆಲಸಗಳು ಕಾರ್ಯಗತಗೊಳ್ಳದೇ ಇರುವುದರಿಂದ, ಭಕ್ತರು ಹಾಗೂ ದೇವಾಲಯದ ಸಿಬ್ಬಂದಿಗಳಿಗೆ ನಿರಂತರವಾಗಿ ತೊಂದರೆ ಆಗುತ್ತಿದ್ದು, ಈ ಗಂಭೀರ ಸಮಸ್ಯೆ ಕುರಿತು ನಿಯಮ 72ರಡಿ ಗಮನ ಸೆಳೆಯುವ ಸೂಚನೆಗೆ ಹಿಂದೂ ಧಾರ್ಮಿಕ ದತ್ತಿ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಹೇಳಿಕೆ:**

*****

ಉತ್ತರ :-

ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಭಾಗಮಂಡಲದಲ್ಲಿರುವ ಶ್ರೀ ಭಗಂಡೇಶ್ವರ ದೇವಾಲಯವು ಹಿಂದೂ ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಗೊಳಪಡುವ ಪ್ರವರ್ಗ 'ಎ' ಶ್ರೇಣಿಯ ದೇವಾಲಯವಾಗಿರುತ್ತದೆ.

ಈ ದೇವಾಲಯದ ಜಾಗದಲ್ಲಿ ಅತಿಥಿ ಗೃಹ ನಿರ್ಮಾಣಕ್ಕಾಗಿ ಸರ್ಕಾರದ ಆದೇಶ ಸಂಖ್ಯೆ: ಕಂಇ 94 ಮುಅಬಿ 2011(1), ದಿನಾಂಕ:15-02-2012ರ ಆದೇಶದಲ್ಲಿ ರೂ80.00ಲಕ್ಷಗಳ ಅನುದಾನ ಮಂಜೂರಾಗಿರುತ್ತದೆ. ಸದರಿ ಕಾಮಗಾರಿಗೆ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಮಡಿಕೇರಿ ಇವರಿಂದ ತಯಾರಾದ ಅಂದಾಜುಪಟ್ಟಿಗೆ ಆಯುಕ್ತರ ಆದೇಶ ಸಂಖ್ಯೆ:ಮುಜರಾಯಿ 5/19-20 ದಿನಾಂಕ:13-11-2020ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಿದ್ದು, ಇದರಲ್ಲಿ ಶೇ.75 ಅನುದಾನ ಅಂದರೆ ರೂ60.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. ಇನ್ನುಳಿದಂತೆ ಲೋಕೋಪಯೋಗಿ ಇಲಾಖೆಯ ವತಿಯಿಂದ ಅತಿಥಿ ಗೃಹ ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳಲು ಬಾಕಿಯಿರುತ್ತದೆ.

ಶ್ರೀ ಭಗಂಡೇಶ್ವರ ದೇವಸ್ಥಾನಕ್ಕೆ ಬಾದ್ಯಪಟ್ಟ ತ್ರಿವೇಣಿ ಸಂಗಮದಲ್ಲಿ ರೂ28.85ಲಕ್ಷ ವೆಚ್ಚದಲ್ಲಿ ಮುಡಿ ಶೆಡ್ ಹಾಗೂ ಪಿಂಡ ಪ್ರಧಾನ ಶೆಡ್ ನಿರ್ಮಾಣ ಕಾಮಗಾರಿ ಸಂಬಂಧ ಯೋಜನಾ ನಿರ್ದೇಶಕರು, ಕೊಡಗು ನಿರ್ಮಿತಿ ಕೇಂದ್ರ, ಮಡಿಕೇರಿ ಇವರು ನೀಡಿರುವ ಅಂದಾಜುಪಟ್ಟಿಗೆ ಆಡಳಿತಾತ್ಮಕ ಮಂಜೂರಾತಿ ನೀಡಿ, ಸದರಿ ಕಾಮಗಾರಿಗೆ ತಗಲುವ ವೆಚ್ಚವನ್ನು ದೇವಾಲಯದ ನಿರಖು ಠೇವಣಿಯಲ್ಲಿ ಲಭ್ಯವಿರುವ ಮೊತ್ತದಿಂದ ಭರಿಸಿ, ಪಾವತಿಸಲು ಅನುಮತಿ ನೀಡಲಾಗಿದ್ದು, ಕಾಮಗಾರಿಯು ಪ್ರಗತಿ ಹಂತದಲ್ಲಿರುತ್ತದೆ.

ಸದರಿ ಕಾಮಗಾರಿಯ ಮುಂಭಾಗದ ಸ್ಥಳದಲ್ಲಿ ರೂ13.50ಲಕ್ಷಗಳ ಅಂದಾಜು ವೆಚ್ಚದಲ್ಲಿ ಉನ್ನತೀಕರಣ ಕಾಮಗಾರಿಗಾಗಿ ಕೊಡಗು ನಿರ್ಮಿತಿ ಕೇಂದ್ರ ಇವರಿಂದ ತಯಾರಾದ ಅಂದಾಜುಪಟ್ಟಿಗೆ ಆಡಳಿತಾತ್ಮಕ ಮಂಜೂರಾತಿ ನೀಡುವ ಪ್ರಸ್ತಾವನೆ ಪರಿಶೀಲನೆಯಲ್ಲಿರುತ್ತದೆ. ಈ ಹೆಚ್ಚುವರಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳುವ ಬಗ್ಗೆ ಗ್ರಾಮಸ್ಥರು, ಭಾಗಮಂಡಲ ಗ್ರಾಮ, ಮಡಿಕೇರಿ ಇವರು ಕೊಡಗು ಜಿಲ್ಲಾ ಉಸ್ತುವಾರಿ ಸಚಿವರಿಗೆ ದೂರು ಸಲ್ಲಿಸಿದ್ದು, ಈ ಬಗ್ಗೆ ಪರಿಶೀಲಿಸಿ ವರದಿ ಸಲ್ಲಿಸಲು ಸಂಬಂಧಪಟ್ಟವರಿಗೆ ಸೂಚಿಸಲಾಗಿರುತ್ತದೆ.

ಕೋವಿಡ್-19ರ ಹಿನ್ನಲೆಯಲ್ಲಿ ದೇವಾಲಯದ ಆದಾಯವು ಕುಂಠಿತಗೊಂಡಿರುವುದರಿಂದ, ತಕ್ಷಕ ವನ ಅಭಿವೃದ್ಧಿ, ಅತಿಥಿ ಗೃಹ, ಪಿಂಡ ಪ್ರಧಾನ ಕಟ್ಟಡದ ಮುಂಭಾಗದಲ್ಲಿ ಇಂಟರ್‌ಲಾಕ್ ಅಳವಡಿಕೆ ಕುರಿತು ಪ್ರಸ್ತುತ ಇಲಾಖೆಯಲ್ಲಿ ಯಾವುದೇ ಪ್ರಸ್ತಾವನೆ ಇರುವುದಿಲ್ಲ.

(ಸಂಖ್ಯೆ: ಕಂಇ 67 ಮುಸಪ್ರ 2021)

(ಕೋಟಾ ಶ್ರೀನಿವಾಸ ಪೂಜಾರಿ)
ಹಿಂದೂ ಧಾರ್ಮಿಕ ಮತ್ತು ಧರ್ಮಾದಾಯ ದತ್ತಿ
ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.